RPAD

# ಕರ್ನಾಟಕ ಸರ್ಕಾರ

ಸಂ ಎಲ್‌ಎನ್‌ಡಿ/ಎಜಿಎಲ್/144/2007-08

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು ದಿನಾಂಕ: 05-11-2012.

-:: ಅಧಿಕೃತ ಜ್ಞಾಪನ ::-

ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸ.ನಂ. 11 ರಲ್ಲಿ 21-18 ಎ/ಗುಂ ಸರ್ಕಾರಿ ಜಮೀನಿನ ಬಹಿರಂಗ ಹರಾಜು ಮಾಡಿದ್ದು, ಈ ಪೈಕಿ 19 ಎಕರೆ 18 ಗುಂಟೆ ಜಮೀನನ್ನು ಕೈಗಾರಿಕಾ (ಹೈಟೆಕ್) ಉದ್ದೇಶಕ್ಕೆ ಭೂ ಪರಿವರ್ತಿಸಿ, ಹಸ್ತಾಂತರಿಸುವ ಬಗ್ಗೆ.

ಉಲ್ಲೇಖ:- 1.ಸರ್ಕಾರಿ ಜಮೀನಿನ ಹರಾಜು ಪ್ರಕಟಣೆ ಸಂಖ್ಯೆ: ಎಲ್‌ಎನ್‌ಡಿ (ಎಜಿಎಲ್) ಸಿಆರ್(ಜಾದ)/2/05-06 ದಿ:26-07-05

2. ಬಹಿರಂಗ .ಹರಾಜನ್ನು ಮಾಡಲು ಸರ್ಕಾರದ ಪೂರ್ವಾನುಮೋದನೆ ಪತ್ರ ಸಂಖ್ಯೆ: ಆರ್‌ಡಿ 269 ಎಲ್‌ಜಿಬಿ 2005(ಪಿ), ದಿ: 12-07-2005

3.ಬಹಿರಂಗ ಹರಾಜನ್ನು ಸರ್ಕಾರವು ಸ್ಥಿರೀಕರಿಸಿರುವ ಪತ್ರ ಸಂ: ಆರ್‌ಡಿ 269 ಎಲ್‌ಜಿಬಿ 2005(ಪಿ) ದಿ: 29-10-05

~~*~~

ಈ ಪ್ರಾಧಿಕಾರದಿಂದ ಉಲ್ಲೇಖ (1)ರ ಬಹಿರಂಗ ಹರಾಜು ಇಸ್ತಿಹಾರ್ ಪ್ರಕಟಣೆಯಂತೆ ಸಹಾಯಕ ಆಯುಕ್ತರು (ಜಾರಿದಳ) ಅನಧಿಕೃತ ನಿರ್ಮಾಣಗಳ ತಡೆ ಸೆಲ್, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಜಿಲ್ಲೆ ರವರಿಂದ ಬೆಂಗಳೂರು ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸ.ನಂ. 11 ರಲ್ಲಿ 21-18ಎಕರೆ (ಇಪ್ಪತ್ತೊಂದು ಎಕರೆ ಹದಿನೆಂಟುಗುಂಟೆ) ವಿಸ್ತೀರ್ಣದ ಸರ್ಕಾರಿ ಜಮೀನನ್ನು ದಿನಾಂಕ: 09/08/2005 ರಂದು ಬಹಿರಂಗವಾಗಿ ಹರಾಜು ಮಾಡಲಾಗಿದೆ. ಸದರಿ ಹರಾಜನ್ನು ಸರ್ಕಾರವು ಉಲ್ಲೇಖ(3)ರ ಪತ್ರದನ್ವಯ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 177(1)ರಡಿ ಸ್ಥಿರೀಕರಿಸಿರುತ್ತೆ. ಆದರೆ ಈ ಪೈಕಿ 2-00 ಎಕರೆ ವಿಸ್ತೀರ್ಣಕ್ಕೆ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 41318-41319/2011 ರಂತೆ ಪ್ರಕರಣ ದಾಖಲಾಗಿರುವುದರಿಂದ 2-00 ಎಕರೆ ಹೊರತು ಪಡಿಸಿ 19-18 ಗುಂಟೆ ಜಮೀನಿಗೆ ಮಾರಾಟ ಪತ್ರ ನೀಡಲಾಗಿದೆ.

ಸೂಪರ್ ಸೈಬರ್ ಟೆಕ್‌ಪಾರ್ಕ್(ಪ್ರೈ) ಲಿಮಿಟೆಡ್, ನಂ. 60/1, 2ನೇ ಅಡ್ಡರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು-560025 ಪರವಾಗಿ ಶ್ರೀ ವೆಂಕಟೇಶ್ವರಲು ರವರು ಹರಾಜಿನ ಅಂತಿಮ ಬಿಡ್‌ದಾರರಾಗಿರುತ್ತಾರೆ. ಅಂತಿಮ ಬಿಡ್ ಮೊತ್ತವಾದ 21,10,00,000-00 (ಇಪ್ಪತ್ತೊಂದು ಕೋಟಿ ಹತ್ತು ಲಕ್ಷ ರೂಗಳು ಮಾತ್ರ) ಗಳನ್ನು ಸರ್ಕಾರಕ್ಕೆ ಪಾವತಿ ಮಾಡಿರುತ್ತಾರೆ. ಈ ಹರಾಜಿಗೆ ಸಂಬಂಧಿಸಿದಂತೆ 19-18 ಗುಂಟೆ ಜಮೀನಿನ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ತಡೆಯಾಜ್ಞೆ ಅಥವಾ ಪ್ರಕರಣಗಳು ಬಾಕಿ ಇರುವುದಿಲ್ಲ. ಪ್ರಸ್ತಾಪಿತ ಹರಾಜು ಜಮೀನು RMP-2015 ರ ನಕ್ಷೆಯಲ್ಲಿ ಕೈಗಾರಿಕಾ (ಹೈಟೆಕ್) ನಲ್ಲಿ ವರ್ಗೀಕರಿಸಲಾಗಿದೆ ಎಂದು ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಅವರ ಪತ್ರ ಬೆಂಅಪ್ರಾ/ನಯೋಸ/ಜಿಪಿಟಿ-256/2836/2012-13, ದಿನಾಂಕ 18-08-2012ರಲ್ಲಿ ಪತ್ರ ಮುಖೇನಾ ತಿಳಿಸಿರುತ್ತಾರೆ.

-2-

ಸೂಪರ್ ಸೈಬರ್ ಟೆಕ್‌ಪಾರ್ಕ್(ಪ್ರೈ) ಲಿಮಿಟೆಡ್ ರವರಿಗೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸ.ನಂ. 11 ರಲ್ಲಿ 19-18 ಎಕರೆ ವಿಸ್ತೀರ್ಣದ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ, ನಗರ ಯೋಜನಾ ಸದಸ್ಯರು ದಿನಾಂಕ 18/08/2012 ರಂದು ಅವರ ಪತ್ರ ಬೆಂಅಪ್ರಾ/ನಯೋಸ/GVT-256/2836/2012-2013 ರಲ್ಲಿ ಸದರಿ ಪ್ರದೇಶವನ್ನು ಆರ್‌ಎಂಪಿ 2015ರ ನಕ್ಷೆಯಲ್ಲಿ ಕೈಗಾರಿಕೆ (ಹೈಟೆಕ್)ನಲ್ಲಿ ವರ್ಗೀಕರಿಸಿದೆ ಎಂದು ಪತ್ರ ನೀಡಿರುವಂತೆ ಸದರಿ ಉದ್ದೇಶಕ್ಕೆ ಭೂ ಪರಿವರ್ತನಾ ಶುಲ್ಕ ರೂ. 33,89,023-00 **(ಮೂವತ್ತಮೂರು ಲಕ್ಷದ ಎಂಭತ್ತೊಂಭತ್ತು ಸಾವಿರದ ಇಪ್ಪತ್ತಮೂರು ರೂಗಳು ಮಾತ್ರ)** ಗಳನ್ನು ಸರ್ಕಾರಕ್ಕೆ ಪಾವತಿಸಿಕೊಂಡು ಕೈಗಾರಿಕೆ(ಹೈಟೆಕ್) ಉದ್ದೇಶಕ್ಕೆ ಉಪಯೋಗಿಸಲು ಸೂಚಿಸಿದೆ. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಬಾರದು.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸ.ನಂ. 11 ರಲ್ಲಿ 19 ಎಕರೆ 18 ಗುಂಟೆ ವಿಸ್ತೀರ್ಣದ ಜಮೀನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್‌ಎಂಪಿ-2015ರಂತೆ ಕೈಗಾರಿಕಾ (ಹೈಟೆಕ್) ವಲಯದಲ್ಲಿದ್ದು, ಈ ಜಮೀನಿಗೆ ಕೆಳಕಂಡ ಷರತ್ತುಗಳಿಗೊಳಪಡಿಸಿ ಭೂ ಪರಿವರ್ತನೆ ನೀಡಲಾಗಿದೆ.

1) ಭೂ ಪರಿವರ್ತಿತ ಜಮೀನನ್ನು ಕೈಗಾರಿಕಾ (ಹೈಟೆಕ್) ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
2) ಈ ಜಮೀನಿನಲ್ಲಿ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು.
3) ಇತರೆ ಅವಶ್ಯಕವಾದ ರಸ್ತೆ ಜಾಗ, ಮಾರ್ಜಿನ್, ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
4) ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ತಹಸೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.
5) ಲೋಕೋಪಯೋಗಿ ಇಲಾಖೆಯವರು ಶಾಸನಾತ್ಮಕವಾಗಿ ನಿರ್ಧರಿಸಿರುವಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತ ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗಧಿಪಡಿಸಿದ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.
6) ಈ ಭೂ ಪರಿವರ್ತನಾ ಜಮೀನಿನಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ, ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು.
7) ಸದರಿ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿರುವ ರೀತಿಯೇ ನಿರ್ಮಿಸತಕ್ಕದ್ದು.
8) ಸಾರ್ವಜನಿಕ ಉಪಯೋಗಕ್ಕಾಗಿ ನಿಗಧಿಪಡಿಸಲ್ಪಟ್ಟ ಜಮೀನನ್ನು ಸಂಬಂಧಿತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು.

9) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನಾ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡಶುಲ್ಕವನ್ನು ವಿಧಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು.

ಅರ್ಜಿದಾರರು ಸದರಿ ಹರಾಜು ಜಮೀನಿನ ಬಾಬ್ತು ಸರ್ಕಾರಕ್ಕೆ ಪಾವತಿ ಮಾಡಿರುವ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಿವರಣೆ | ಬ್ಯಾಂಕ್ | ಚಲನ್ ನಂ. ಮತ್ತು ದಿನಾಂಕ | ಮೊಬಲಗು ರೂ. |
|---|---|---|---|---|
| 1. | ವಿಸ್ತೀರ್ಣ21-18ಎಕರೆ ಹರಾಜಿನ ಶೇ.25ರಷ್ಟು ಬಿಡ್ ಮೊತ್ತ | ಎಸ್.ಬಿ.ಎಂ. ಟ್ರೆಜರಿ ಬ್ರಾಂಚ್ | ಚಲನ್ ಸಂಖ್ಯೆ 3-8300589 ದಿ.11-04-2007 | 5,27,50,000-00 |
| 2. | ವಿಸ್ತೀರ್ಣ 21-18 ಎಕರೆ ಹರಾಜಿನ ಶೇ.75ರಷ್ಟು ಆಕ್ಶೈರ್ ಬಿಡ್ ಮೊತ್ತ | ಎಸ್.ಬಿ.ಎಂ. ಟ್ರೆಜರಿ ಬ್ರಾಂಚ್ | ಚಲನ್ ಸಂಖ್ಯೆ .10877/11 ದಿ.17-11-2011 | 15,82,50,000-00 |
| | | | | 21,10,00,000-00 |
| | | | | ಇಪ್ಪತ್ತೊಂದು ಕೋಟಿ ಹತ್ತು ಲಕ್ಷ ರೂಪಾಯಿಗಳು ಮಾತ್ರ) |

**-:: ಚಕ್ಕುಬಂದಿ – 1 ::-**

| | | |
|---|---|---|
| ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಸ.ನಂ.11 ರಲ್ಲಿ 21 ಎಕರೆ 18 ಗುಂಟೆ | ಪೂರ್ವಕ್ಕೆ | ಚಿಕ್ಕನಾಗಮಂಗಲ ಗ್ರಾಮದ ಗಡಿ |
| | ಪಶ್ಚಿಮಕ್ಕೆ – | ಸ.ನಂ.10 |
| | ಉತ್ತರಕ್ಕೆ | ಸ.ನಂ.6 |
| | ದಕ್ಷಿಣಕ್ಕೆ | ಸ.ನಂ.95, 12 ಮತ್ತು ಸ.ನಂ.11ರ ಉಳಿಕೆ ಜಮೀನು. |

ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 41318-41319/2011 ರಂತೆ 2-00 ಎಕರೆಗೆ ಪ್ರಕರಣ ದಾಖಲಾಗಿರುವುದರಿಂದ, 19-18 ಗುಂಟೆ ಜಮೀನಿಗೆ ತಹಸೀಲ್ದಾರ್ ಬೆಂಗಳೂರು ದಕ್ಷಿಣ ರವರು ಪತ್ರ ಸಂಖ್ಯೆ ಎಲ್ಎನ್‌ಡಿ(ಬಿಹೆಚ್)ಸಿಆರ್/30/2012-13 ದಿನಾಂಕ 30/10/2012 ರಂದು ಬರೆದಿರುವ ಪತ್ರ ಹಾಗೂ ಲಗತ್ತಿಸಿರುವ ನಕ್ಷೆಯ ಪ್ರಕಾರ ಚೆಕ್ಕುಬಂದಿ ಈ ಕೆಳಕಂಡಂತೆ ನಮೂದಿಸಿದೆ.

**-:: ಚಕ್ಕುಬಂದಿ-2 ::-**

| | | |
|---|---|---|
| ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಸ.ನಂ. 11 ರಲ್ಲಿ 21 ಎಕರೆ 18 ಗುಂಟೆ ಪೈಕಿ 19 ಎಕರ 18 ಗುಂಟೆ. | ಪೂರ್ವಕ್ಕೆ | ಚಿಕ್ಕನಾಗಮಂಗಲ ಗ್ರಾಮದ ಗಡಿ |
| | ಪಶ್ಚಿಮಕ್ಕೆ | ಸ.ನಂ.10 |
| | ಉತ್ತರಕ್ಕೆ | ಸ.ನಂ.11 ರ 2-00 ಎಕರ ನ್ಯಾಯಾಲಯದಲ್ಲಿರುವ ಪ್ರಕರಣದ ಪ್ರದೇಶ. |
| | ದಕ್ಷಿಣಕ್ಕೆ | ಸ.ನಂ.95,12,ಇದೇ ಸ.ನಂ.ಪೈಕಿ ಉಳಿಕೆ ಪ್ರದೇಶ ಹಾಗೂ ಸಂಪರ್ಕರಸ್ತೆ |

ದೊಡ್ಡನಾಗಮಂಗಲ ಸ.ನಂ. 11 ರಲ್ಲಿ 21–18 ಗುಂಟೆ ಪೈಕಿ 19–18 ಎಕರೆ ವಿಸ್ತೀರ್ಣದ ಜಮೀನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ 2015 ರಂತೆ ಇಂಡಸ್ಟ್ರಿಯಲ್ ಹೈಟೆಕ್ ವಲಯದಲ್ಲಿ ಬರುತ್ತಿದ್ದು, ಸದರಿ ಭೂ ಉಪಯೋಗದಲ್ಲಿ ಅಭಿವೃದ್ಧಿಗಳಿಗೆ ಅನುವು ಮಾಡಲು ಈ ಭೂಮಿಯನ್ನು ಸಂಬಂಧಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಡಾವಣೆ ನಕ್ಷೆ ಹಾಗೂ ಪರವಾನಗಿ ಪಡೆಯದೆ ಯಾವುದೇ ಅಭಿವೃದ್ಧಿ ಚಟುವಟಿಕೆಗಳನ್ನು ಮಾಡತಕ್ಕದಲ್ಲ.ಅಂತಿಮ ಬಿಡ್ದುದಾರರಾದ ಸೂಪರ್ ಸೈಬರ್ ಟೆಕ್‌ಪಾರ್ಕ್(ಪ್ರೈ) ಲಿಮಿಟೆಡ್, ನಂ. 60/1, 2ನೇ ಅಡ್ಡರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು–560025 ರವರು ನಿಯಮಾನುಸಾರ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕವನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳತಕ್ಕದು.

ಸಹಿ/-
(ಎಂ.ಕೆ.ಅಯ್ಯಪ್ಪ)
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಕೆ.ಹೆಚ್.ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
4) ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು ರವರಿಗೆ ಕಳುಹಿಸಿದೆ.
5) ತಹಸೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಮುಂದಿನ ನಡವಳಿಕೆಗಾಗಿ ರವಾನಿಸಿದೆ.
6) ಸೂಪರ್ ಸೈಬರ್ ಟೆಕ್‌ಪಾರ್ಕ್(ಪ್ರೈ) ಲಿಮಿಟೆಡ್, ನಂ. 60/1, 2ನೇ ಅಡ್ಡರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು–560025
7) ಕಚೇರಿ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಶಿವಾಜಿನಗರದಲ್ಲಿರುವ ಎಸ್‌ಬಿಎಂ ಖಜಾನೆ ಶಾಖೆಯ ಬ್ಯಾಂಕ್‌ನಲ್ಲಿ ಪಾವತಿಸಿದ

| ಖಜಾನೆ ಕೋಡು | ಡ್ರಾ.ಅ.ಕೋಡು | ದಿನಾಂಕ | ಚಲನ್ ನಂ |
| --- | --- | --- | --- |
| 0100 | 00017 | 10-08-2012 | 8 7 C 2 2 6 |
| ಪಾವತಿದಾರನ ಹೆಸರು | ಸೂಪರ್ ಸೈಬರ್ ಟೆಕ್ ಪಾರ್ಕ್ ಪ್ರೈ.ಲಿ. ನಂ. 60/1,2 ನೇ ಅಡ್ಡರಸ್ತೆ, ರೆಸಿಡೆನ್ಸಿ ರೋಡ್, ಬೆಂಗಳೂರು | | |
| ಪಾವತಿಯ ಉದ್ದೇಶ: | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21-18 ಪೈಕಿ 2-00 ಎಕರೆ ಹೊರತುಪಡಿಸಿ 19-18 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ. | | ಸರಿಯಾಗಿದೆ ಹಣ ಸ್ವೀಕರಿಸಿ. ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು |
| ಲೆಕ್ಕದ ಬಾಬ್ತಿನ ವಿವರ | ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಂ:ಎಲ್‌ಎನ್‌ಎ/ಎಬಿಎಲ್/ಸಿಆರ್/144/07-08 ದಿನಾಂಕ:10-08-2012 ಭೂ ಪರಿವರ್ತನಾ (0029-00-106-0-03) | | |
| ಪಾವತಿಯ ವಿವರ | ಲೆಕ್ಕಶೀರ್ಷಿಕೆ ಕೋಡ್ | | ಮೊಬಲಗು ರೂ. |
| | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21-18 ಪೈಕಿ 2-00 ಎಕರೆ ಹೊರತುಪಡಿಸಿ 19-18 ಎಕರೆ/ಗುಂಟೆ ವಿಸ್ತೀರ್ಣದ ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ 1,74,240-00 | | 33,88,968-00 |
| | | | 33,88,968-00 |
| ಪದಗಳಲ್ಲಿ (ಮೂವತ್ತಮೂರು ಲಕ್ಷದ ಎಂಬತ್ತೆಂಟು ಸಾವಿರದ ಒಂಬೈನೂರ ಅರವತ್ತೆಂಟು ರೂಪಾಯಿಗಳು ಮಾತ್ರ) | | | |
| ಸ್ಥಳ: ಬೆಂಗಳೂರು | | | ಪಾವತಿದಾರನ ಸಹಿ. |
| ಖಜಾನೆ | | ಖಜಾನೆ/ಬ್ಯಾಂಕ್ ಅಧಿಕಾರಿ | |

State Bank of Mysore (40658) Govt. Business Branch (40658) 001 L C Road, Bangalore. SBM Code 40658 14 AUG 2012 TRANSFER Initial

ಶಿವಾಜಿನಗರದಲ್ಲಿರುವ ಎಸ್‌ಬಿಎಂ ಖಜಾನೆ ಶಾಖೆಯ ಬ್ಯಾಂಕ್‌ನಲ್ಲಿ ಪಾವತಿಸಿದೆ

ಶಿವಾಜಿನಗರದಲ್ಲಿರುವ ಎಸ್‌ಬಿಎಂ ಖಜಾನೆ ಶಾಖೆಯ ಬ್ಯಾಂಕ್‌ನಲ್ಲಿ ಪಾವತಿಸಿದ

| ಖಜಾನೆ ಕೋಡು | ಡ್ರಾ ಅ ಕೋಡು | ದಿನಾಂಕ | ಚಲನ್ ನಂ |
| --- | --- | --- | --- |
| 0100 | 00017 | 10-08-2012 | 185 |
| ಪಾವತಿದಾರ ಹೆಸರು | ಸೂಪರ್ ಸೈಬರ್ ಟೆಕ್ ಪಾರ್ಕ್ ಪ್ರೈ.ಲಿ. ನಂ. 60/1,2 ನೇ ಅಡ್ಡರಸ್ತೆ, ರೆಸಿಡೆನ್ಸಿ ರೋಡ್, ಬೆಂಗಳೂರು | | |
| ಪಾವತಿಯ ಉದ್ದೇಶ | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21-18 ಪೈಕಿ 2-00 ಎಕರೆ ಹೊರತುಪಡಿಸಿ 19-18 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ. | | ಸರಿಯಾಗಿದೆ ಹಣ ಸ್ವೀಕರಿಸಿ. ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು |
| ಲೆಕ್ಕದ ಬಾಬ್ತಿನ ವಿವರ | ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಂ:ಎಲ್‌ಎನ್‌ಎ/ಎಬಿಎಲ್/ಸಿಆರ್/144/07-08 ದಿನಾಂಕ:10-08-2012 ಮೋಡಿ - (0029-00-106-0-01) | | |
| ಪಾವತಿಯ ವಿವರ | ಲೆಕ್ಕಶೀರ್ಷಿಕೆ ಕೋಡ್ | | ಮೊಬಲಗು ರೂ. |
| | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21-18 ಪೈಕಿ 2-00 ಎಕರೆ ಹೊರತುಪಡಿಸಿ 19-18 ಎಕರೆ/ಗುಂಟೆ ವಿಸ್ತೀರ್ಣದ ಮೋಡಿ ಶುಲ್ಕ | | 55-00 |
| | | | 55-00 |
| ಸ್ಥಳ: ಬೆಂಗಳೂರು | | | ಪಾವತಿದಾರನ ಸಹಿ. |
| ಖಜಾನೆ | | ಖಜಾನೆ/ಬ್ಯಾಂಕ್ ಅಧಿಕಾರಿ | |

State Bank of Mysore Govt. Business Branch 14 AUG 2012 CASH/RECEIVED/TRANSFER/CLG Initial

ಶಿವಾಜಿನಗರದಲ್ಲಿರುವ ಎಸ್‌ಬಿಎಂ ಖಜಾನೆ ಶಾಖೆಯ ಬ್ಯಾಂಕ್‌ನಲ್ಲಿ ಪಾವತಿಸಿದೆ

# ಕರ್ನಾಟಕ ಸರ್ಕಾರ

**ಸಂ**:ಎಲ್.ಎನ್.ಡಿ/ಎಜಿಎಲ್/ಸಿಆರ್/144/07-08

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 17-01-2024

## ತಿದ್ದುಪಡಿ ಅಧಿಕೃತ ಜ್ಞಾಪನ

**ವಿಷಯ:-** ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸ.ನಂ.11 ರಲ್ಲಿ 21-18 ಎ/ಗುಂ ಜಮೀನಿನ ಭೂ ಪರಿವರ್ತನೆ ಆದೇಶದಲ್ಲಿ ಚೆಕ್ಕುಬಂದಿಯನ್ನು ತಿದ್ದುಪಡಿ ಮಾಡುವಂತೆ ಕೋರಿರುವ ಬಗ್ಗೆ.

**ಉಲ್ಲೇಖ:-**
1. ಇದೆ ಸಮ ಸಂಖ್ಯೆಯ ಅಧಿಕೃತ ಜ್ಞಾಪನ ದಿನಾಂಕ:05-11-2012
2. ಇದೆ ಸಮ ಸಂಖ್ಯೆಯ ಪರಿಷ್ಕೃತ ಅಧಿಕೃತ ಜ್ಞಾಪನ ದಿನಾಂಕ:02-05-2019.
3. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ದಕ್ಷಿಣ ತಾಲ್ಲೂಕು ರವರ ಪತ್ರ ಸಂ:ಭೂಸನಿ/ಪಿಆರ್/ಇತರೆ/197/23-24 ದಿನಾಂಕ:10-08-2023
4. ಶ್ರೀ.ಸುವ್ರೀತ್ ಸ್ಟ್ರಕ್.ಚರ್ಸ್. ಶ್ರೀ ಮೈ ಬಿಲ್ಡಕಾನ್, ಶ್ರೀ.ಸಾಯಿ ಆದರ್ಷ ಇನ್ಫ್ರಾ, ಬೆಂಗಳೂರು ರವರ ಮನವಿ ದಿನಾಂಕ:10-08-2023.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಉಲ್ಲೇಖ(4)ರಂತೆ ಮನವಿ ಸಲ್ಲಿಸಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11ರಲ್ಲಿ 21 ಎಕರೆ 18 ಗುಂಟೆ ಸರ್ಕಾರಿ ಜಮೀನನ್ನು ಬಹಿರಂಗ ಹರಾಜು ಮಾಡಿದ್ದು, ಈ ಪೈಕಿ 19 ಎಕರೆ 18 ಗುಂಟೆ ಜಮೀನನ್ನು ದಿನಾಂಕ:05.11.2012ರಂದು ಕೈಗಾರಿಕೆ (ಹೈಟೆಕ್) ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು ತದನಂತರ ದಿನಾಂಕ:12.05.2019ರಲ್ಲಿ ಕೈಗಾರಿಕೆ (ಹೈಟೆಕ್) ಉದ್ದೇಶದಿಂದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆದೇಶವನ್ನು ಪರಿಷ್ಕೃತ ಅಧಿಕೃತ ಜ್ಞಾಪನ ಮುಖಾಂತರ ಮಾಡಲಾಗಿರುತ್ತದೆ. ಪ್ರಸ್ತುತ ಸರ್ವೆ ನಂ.11ರಲ್ಲಿ 19 ಎಕರೆ 18 ಗುಂಟೆ ಪೈಕಿ 1) M/S SAI ADARSH INFRA ರವರಿಗೆ 1 ಎಕರೆ 36 ಗುಂಟೆ 2)M/s SUVRITH STRUCTURES ರವರಿಗೆ 1 ಎಕರೆ 20 ಗುಂಟೆ ಮತ್ತು 3)M/s MY BUILDCON ರವರಿಗೆ 1 ಎಕರೆ 28 ಗುಂಟೆ ಜಮೀನು ಕ್ರಯ ಆಗಿರುತ್ತದೆ ಉಳಿಕೆ ಜಮೀನಾದ 14 ಎಕರೆ 14 ಗುಂಟೆ ಜಮೀನನ್ನು ಮೆ|| ಸೂಪರ್ ಸೈಬರ್ ಟೆಕ್ ಪಾರ್ಕ್ (ಪ್ರೈ) ಲಿಮಿಟೆಡ್ ಮಾಲೀಕತ್ವದಲ್ಲಿ ಉಳಿಸಿ ಚಕ್ಕುಬಂದಿ ತಿದ್ದುಪಡಿ ಮಾಡಿ ಪರಿಷ್ಕೃತ ಅಧಿಕೃತ ಜ್ಞಾಪನ ನೀಡಬೇಕೆಂದು ಕೋರಿರುತ್ತಾರೆ.

ಅದರಂತೆ, ಪರಿಶೀಲಿಸಲಾಗಿ, ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸ.ನಂ.11 ರಲ್ಲಿ 21-18 ಎ/ಗುಂ ಸರ್ಕಾರಿ ಜಮೀನನ್ನು ದಿನಾಂಕ:09-08-2005 ರಂದು ಬಹಿರರಗವಾಗಿ ಹರಾಜು ಮಾಡಲಾಗಿದ್ದು, ಸದರಿ ಹರಾಜನ್ನು ಸರ್ಕಾರದ ಪತ್ರ ಸಂ:ಆರ್‌ಡಿ /269/ಎಲ್‌ಜಿಬಿ 2005(ಪಿ), ದಿನಾಂಕ:12.07.2005 ರನ್ವಯ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 177(1)ರಡಿ ಸ್ಥಿರೀಕರಿಸಿರುತ್ತೆ. ಆದರೆ ಈ ಪೈಕಿ 2-00 ಎಕರೆ ವಿಸ್ತೀರ್ಣಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ:41318-41319/2011 ರಂತೆ ಪ್ರಕರಣ ದಾಖಲಾಗಿರುವುದರಿಂದ 2-00 ಎಕರೆ

ಹೊರತುಪಡಿಸಿ 19-18 ಎ/ಗುಂ ಜಮೀನಿಗೆ ಸೂಪರ್ ಸೈಬರ್ ಟೆಕ್ ಪಾರ್ಕ್ (ಪ್ರೈ) ಲಿಮಿಟೆಡ್ ನಂ.60/1, 2ನೇ ಅಡ್ಡರಸ್ತೆ, ರಸಿಡೆನ್ಸಿ ರಸ್ತೆ, ಬೆಂಗಳೂರು-560025 ಪರವಾಗಿ ಶ್ರೀ ವೆಂಕಟೇಶ್ವರಲು ರವರು ಹರಾಜಿನ ಅಂತಿಮ ಬಿಡ್ ದಾರರಾಗಿರುತ್ತಾರೆ. ಅಂತಿಮ ಬಿಡ್ ಮೊತ್ತವಾದ ರೂ.21,10,00,000-00 (ಇಪ್ಪತ್ತೊಂದು ಕೋಟಿ ಹತ್ತು ಲಕ್ಷ ರೂ.ಗಳು ಮಾತ್ರ) ಗಳನ್ನು ಸರ್ಕಾರಕ್ಕೆ ಪಾವತಿ ಮಾಡಿರುತ್ತಾರೆ. ಹಾಗೂ 19-18 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಉಲ್ಲೇಖ(1)ರಂತೆ ಭೂ ಪರಿವರ್ತನಾ ಆದೇಶವನ್ನು ನೀಡಲಾಗಿರುತ್ತದೆ.

ತದನಂತರ ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸ.ನಂ.11 ರಲ್ಲಿ 21-18 ಎ/ಗುಂ ಪೈಕಿ 19-18 ಎ/ಗುಂ ಜಮೀನನ್ನು ಕೈಗಾರಿಕಾ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಉಲ್ಲೇಖ(2)ರಂತೆ ಪರಿಷ್ಕೃತ ಅಧಿಕೃತ ಜ್ಞಾಪನ ಹೊರಡಿಸಲಾಗಿರುತ್ತದೆ.

ಪ್ರಸ್ತುತ ಉಲ್ಲೇಖ(4)ರ ಶ್ರೀ.ಸುಪ್ರೀತ್ ಸ್ಟ್ರಕ್.ಚರ್ಸ್. ಶ್ರೀ ಮೈ ಬಿಲ್ಡಕಾನ್, ಶ್ರೀ.ಸಾಯಿ ಆದರ್ಶ ಇನ್ಫ್ರಾ, ಬೆಂಗಳೂರು ರವರ ಕೋರಿಕೆಯಂತೆ ಮತ್ತು ಉಲ್ಲೇಖ(3)ರ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ನೀಡಿರುವ ಸರ್ವೆ ನಕ್ಷೆಯನ್ನಾಧರಿಸಿ, ಉಲ್ಲೇಖ(2)ರ ಪರಿಷ್ಕೃತ ಅಧಿಕೃತ ಜ್ಞಾಪನದಲ್ಲಿ ಚೆಕ್ಕುಬಂದಿ ತಿದ್ದುಪಡಿ ಮಾಡಿ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ.

**ಈ ಹಿಂದೆ ದಿನಾಂಕ:02.05.2019ರ ಪರಿಷ್ಕೃತ ಅಧಿಕೃತ ಜ್ಞಾಪನ ಪತ್ರದಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸ.ನಂ.11 ರಲ್ಲಿ 19-18 ಎ/ಗುಂ ಜಮೀನಿಗೆ ಚೆಕ್ಕುಬಂದಿ**

| ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|
| ಚಿಕ್ಕನಾಗಮಂಗಲ ಗ್ರಾಮದ ಗಡಿ | ಸ.ನಂ.10 | ಸ.ನಂ.11ರ 2-00 ಎಕರೆ | ಸ.ನಂ.95, 12 ಇದೇ ಸ.ನಂ.ಪೈಕಿ ಉಳಿಕೆ ಪ್ರದೇಶ ಹಾಗೂ ಸಂಪರ್ಕ ರಸ್ತೆ |

**ಉಲ್ಲೇಖ(3)ರ ತಾಲ್ಲೂಕು ಭೂಮಾಪಕರ ನಕ್ಷೆಯಂತೆ ಚೆಕ್ಕುಬಂದಿ**

**ಸ.ನಂ.11 ರಲ್ಲಿ 19-18 ಎ/ಗುಂ ಪೈಕಿ 14-14 ಎ/ಗುಂ ಜಮೀನಿಗೆ ಚೆಕ್ಕುಬಂದಿ**

| ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|
| ರಸ್ತೆ | ಸ.ನಂ.10ರ ಜಮೀನು | ಸ.ನಂ.11(ಪಿ)ರ ಜಮೀನು | ಸ.ನಂ.12, 95 & 11(ಪಿ)ರ ಜಮೀನು |

**ಸ.ನಂ.11 ರಲ್ಲಿ 19-18 ಎ/ಗುಂ ಪೈಕಿ 1-36 ಎ/ಗುಂ ಜಮೀನಿಗೆ ಚೆಕ್ಕುಬಂದಿ**

| ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|
| ರಸ್ತೆ | ಸ.ನಂ.11(ಪಿ)ರ ಜಮೀನು | ಸ.ನಂ.11(ಪಿ)ರ ಜಮೀನು | ಸ.ನಂ.11(ಪಿ)ರ ಜಮೀನು |

**ಸ.ನಂ.11 ರಲ್ಲಿ 19-18 ಎ/ಗುಂ ಪೈಕಿ 1-20 ಎ/ಗುಂ ಜಮೀನಿಗೆ ಚೆಕ್ಕುಬಂದಿ**

| ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|
| ರಸ್ತೆ | ಸ.ನಂ.11(ಪಿ)ರ ಜಮೀನು | ಸ.ನಂ.11(ಪಿ)ರ ಜಮೀನು | ಸ.ನಂ.11(ಪಿ)ರ ಜಮೀನು |

**ಸ.ನಂ.11 ರಲ್ಲಿ 19-18 ಎ/ಗುಂ ಪೈಕಿ 1-28 ಎ/ಗುಂ ಜಮೀನಿಗೆ ಚೆಕ್ಕುಬಂದಿ**

| ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|
| ರಸ್ತೆ | ಸ.ನಂ.95ರ ಜಮೀನು | ಸ.ನಂ.11(ಪಿ)ರ ಜಮೀನು | ಸ.ನಂ.11(ಪಿ)ರ ಜಮೀನು |

ಉಳಿದಂತೆ, ಉಲ್ಲೇಖ(2)ರ ಪರಿಷ್ಕೃತ ಭೂಪರಿವರ್ತನೆ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಉಲ್ಲೇಖ(1) & (2)ರ ಭೂ ಪರಿವರ್ತನೆ ಆದೇಶದಲ್ಲಿನ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ ಮತ್ತು ಈ ಜಮೀನಿನ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದಲ್ಲಿ ಈ ಆದೇಶವನ್ನು ರದ್ದುಗೊಳಿಸುವ ಅಧಿಕಾರವು ಈ ಪ್ರಾಧಿಕಾರಕ್ಕೆ ಇರುತ್ತದೆ ಹಾಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದಲ್ಲಿ, ಈ ಪರಿಷ್ಕೃತ ಆದೇಶವು ಘನ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

**(ದಯಾನಂದ .ಕೆ.ಎ)**
ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,

**ಪ್ರತಿಯನ್ನು:**

1. ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಶ್ರೀ.ಸುಪ್ರೀತ್ ಸ್ಟ್ರಕ್.ಚರ್ಸ್. ಶ್ರೀ ಮ್ಯ ಬಿಲ್ಡಕಾನ್, ಶ್ರೀ.ಸಾಯಿ ಆದರ್ಷ ಇನ್ಫ್ರಾ ರವರಿಗೆ ಮಾಹಿತಿಗಾಗಿ.
3. ಕಛೇರಿ/ಹೆಚ್ಚುವರಿ ಪ್ರತಿ.

...3

ಕರ್ನಾಟಕ ಸರ್ಕಾರ

ಸಂಖ್ಯೆ: ಎಲ್‌ಎನ್‌ಡಿ/ಎಜಿಎಲ್/ಸಿಆರ್/144/07-08.

ವಿಶೇಷ ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಾರಿದಳ), ಅ.ನಿ.ತಡೆ ಕೋಶ,
ಬೆಂಗಳೂರು. ದಿನಾಂಕ: 02-05-2019.

**-: ಪರಿಷ್ಕೃತ ಅಧಿಕೃತ ಜ್ಞಾಪನ :-**

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21-18 ಎ/ಗುಂ ಸರ್ಕಾರಿ ಜಮೀನಿನ ಬಹಿರಂಗ ಹರಾಜು ಮಾಡಿದ್ದು, ಈ ಪೈಕಿ 19 ಎಕರೆ 18 ಗುಂಟೆ ಜಮೀನನ್ನು ಕೈಗಾರಿಕಾ (ಹೈಟೆಕ್) ಉದ್ದೇಶಕ್ಕೆ ಭೂಪರಿವರ್ತನೆಯಾಗಿರುವ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನಾ ಆದೇಶ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಜಮೀನಿನ ಹರಾಜು ಪ್ರಕಟಣೆ ಸಂಖ್ಯೆ:ಎಲ್‌ಎನ್‌ಡಿ (ಎಜಿಎಲ್) ಸಿಆರ್ (ಜಾಪ) 2/05-06, ದಿ:26-07-2005.
2. ಬಹಿರಂಗ ಹರಾಜನ್ನು ಮಾಡಲು ಸರ್ಕಾರದ ಪೂರ್ವಾನುಮೋದನೆ ಪತ್ರ ಸಂಖ್ಯೆ:ಆರ್‌ಡಿ 269 ಎಲ್‌ಜಿಬಿ 2005 (ಪಿ), ದಿ:12-07-2005.
3. ಬಹಿರಂಗ ಹರಾಜನ್ನು ಸರ್ಕಾರವು ಸ್ಥಿರೀಕರಿಸಿರುವ ಪತ್ರ ಸಂ:ಆರ್‌ಡಿ 269 ಎಲ್‌ಜಿಬಿ 2005(ಪಿ) ದಿ:29-10-2005.
4. ಈ ಕಛೇರಿ ಸಮಸಂಖ್ಯೆ ಅಧಿಕೃತ ಜ್ಞಾಪನ ಪತ್ರ ದಿನಾಂಕ: 05-11-2012.
5. ಬಿಡ್‌ದಾರರ ಮನವಿ ದಿನಾಂಕ: 05-01-2019.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು/ -ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ. ಬೆಂಅಪ್ರಾ/ನಯೋಸ/ಪಿಎಲ್-46/17-18/ಜಿವಿಟಿ-635/2105/2018-19, ದಿನಾಂಕ: 02-03-2019.

********

ಈ ಪ್ರಾಧಿಕಾರದಿಂದ ಉಲ್ಲೇಖ (1) ರ ಬಹಿರಂಗ ಹರಾಜು ಇಸ್ತಿಹಾರ್ ಪ್ರಕಟಣೆಯಂತೆ ಸಹಾಯಕ ಆಯುಕ್ತರು (ಜಾರಿದಳ) ಅನಧಿಕೃತ ನಿರ್ಮಾಣಗಳ ತಡೆಸೆಲ್, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ಜಿಲ್ಲೆ ರವರಿಂದ ಬೆಂಗಳೂರು ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21-18 ಎಕರೆ (ಇಪ್ಪತ್ತೊಂದು ಎಕರೆ ಹದಿನೆಂಟು ಗುಂಟೆ) ವಿಸ್ತೀರ್ಣದ ಸರ್ಕಾರಿ ಜಮೀನನ್ನು ದಿನಾಂಕ:09/08/2005 ರಂದು ಬಹಿರಂಗವಾಗಿ ಹರಾಜು ಮಾಡಲಾಗಿದೆ, ಸದರಿ ಹರಾಜನ್ನು ಸರ್ಕಾರವು ಉಲ್ಲೇಖ (3) ರ ಪತ್ರದನ್ವಯ ಕರ್ನಾಟಕ ಭೂಕಂದಾಯ ಕಾಯಿದೆ 1964 ರ ಕಲಂ 177 (1) ರಡಿ ಸ್ಥಿರೀಕರಿಸಿರುತ್ತೆ.

ಸೂಪರ್ ಸೈಬರ್ ಟೆಕ್‌ಪಾರ್ಕ್(ಪ್ರೈ) ಲಿಮಿಟೆಡ್, ನಂ.60/1, 2ನೇ ಅಡ್ಡರಸ್ತೆ, ರಸಿಡೆನ್ಸಿ ರಸ್ತೆ, ಬೆಂಗಳೂರು-560 025 ಪರವಾಗಿ ಶ್ರೀ ವೆಂಕಟೇಶ್ವರಲು ರವರು ಹರಾಜಿನ ಅಂತಿಮ ಬಿಡ್‌ದಾರರಾಗಿರುತ್ತಾರೆ, ಅಂತಿಮ ಬಿಡ್ ಮೊತ್ತವಾದ ರೂ.21,10,00.000-00 (ಇಪ್ಪತ್ತೊಂದು ಕೋಟಿ ಹತ್ತು ಲಕ್ಷ ರೂಗಳು ಮಾತ್ರ) ಗಳನ್ನು ಸರ್ಕಾರಕ್ಕೆ ಪಾವತಿ ಮಾಡಿರುತ್ತಾರೆ, ಹಾಗೂ 19-18 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಉಲ್ಲೇಖ (4)ರಂತೆ ಭೂ ಪರಿವರ್ತನಾ ಆದೇಶವನ್ನು ನೀಡಲಾಗಿರುತ್ತದೆ.

ಉಲ್ಲೇಖ (5)ರನ್ವಯ ಅರ್ಜಿದಾರರು ದಿನಾಂಕ: 05-01-2019ರಂತೆ ಅರ್ಜಿ ಸಲ್ಲಿಸಿ, ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾದ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಕೊಡುವಂತೆ ಕೋರಿದ ಮೇರೆಗೆ ಉಲ್ಲೇಖ (6)ರನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರ ಯೋಜನಾ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರು ನೀಡಿರುವ ಅಭಿಪ್ರಾಯದನ್ವಯ ದಿನಾಂಕ: 25-06-2007 ರಂದು ಸರ್ಕಾರದಿಂದ ಅನುಮೋದನೆಗೊಂಡಿರುವ ಆರ್‌ಎಂಪಿ-2015 ರಂತೆ ಕೈಗಾರಿಕೆ (ಹೈಟೆಕ್) ವಲಯಕ್ಕಾಗಿ

----2)

ವರ್ಗೀಕರಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಉಪಯೋಗ ಬದಲಾವಣೆ ಸಂಬಂಧ ನೀಡಲಾಗಿರುವ ಪ್ರಾರಂಭಿಕ ದೃಢೀಕರಣ ಪತ್ರದ ಸಂಖ್ಯೆ: ಬೆಂಅಪ್ರಾ/ನಯೋಸ/ಸಿಎಲ್‌ಯು-05/2013-14/1122/2013-14 ದಿನಾಂಕ: 19-06-2013ರಂತೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14-ಎ ಸಬ್ ಸೆಕ್ಷನ್ 3 ರಂತೆ (Deemed Permission) ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ ದೊಡ್ಡನಾಗಮಂಗಲ ಗ್ರಾಮದ ಸ.ನಂ.11ರಲ್ಲಿನ 19-18 ಎ/ಗು ಅಥವಾ 78710.26 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ (ಹೈಟೆಕ್) ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಕೆಲವು ಸಾಮಾನ್ಯ ಷರತ್ತುಗಳಿಗೊಳಪಡಿಸಿ ಅನುಮತಿ ನೀಡಲಾಗಿದೆ ಎಂದು ವರದಿ ನೀಡಿರುತ್ತಾರೆ.

**ಅರ್ಜಿದಾರರು ಸದರಿ ಹರಾಜು ಜಮೀನಿನ ಬಾಬ್ತು ಸರ್ಕಾರಕ್ಕೆ ಪಾವತಿ ಮಾಡಿರುವ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಕ್ರ ಸಂ. | ವಿವರಣೆ | ಬ್ಯಾಂಕ್ | ಚಲನ್ ನಂ. ಮತ್ತು ದಿನಾಂಕ | ಮೊಬಲಗು ರೂ. |
|---|---|---|---|---|
| 1. | ವಿಸ್ತೀರ್ಣ 21-18 ಎಕರೆ ಹರಾಜಿನ ಶೇ.25 ರಷ್ಟು ಬಿಡ್ ಮೊತ್ತ | ಎಸ್.ಬಿ.ಎಂ. ಟ್ರೆಜರಿ ಬ್ರಾಂಚ್ | ಚಲನ್ ಸಂಖ್ಯೆ:3-8300589 ದಿ:11-04-2007 | 5,27,50,000-00 |
| 2. | ವಿಸ್ತೀರ್ಣ 21-18 ಎಕರೆ ಹರಾಜಿನ ಶೇ.75 ರಷ್ಟು ಆಖೈರ್ ಬಿಡ್ ಮೊತ್ತ | ಎಸ್.ಬಿ.ಎಂ. ಟ್ರೆಜರಿ ಬ್ರಾಂಚ್ | ಚಲನ್ ಸಂಖ್ಯೆ:10877/11 ದಿ:17-11-2011 | 15,82,50,000-00 |
| | | | **ಒಟ್ಟು** | **21,10,00,000-00** |
| | | | | **ಇಪ್ಪತ್ತೊಂದು ಕೋಟಿ ಹತ್ತು ಲಕ್ಷ ರೂಪಾಯಿಗಳು ಮಾತ್ರ** |

**- :: ಚಕ್ಕುಬಂದಿ 1 :: -**

| | | |
|---|---|---|
| ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 21 ಎಕರೆ 18 ಗುಂಟೆ | ಪೂರ್ವಕ್ಕೆ | ಚಿಕ್ಕನಾಗಮಂಗಲ ಗ್ರಾಮದ ಗಡಿ |
| | ಪಶ್ಚಿಮಕ್ಕೆ | ಸ.ನಂ.10 |
| | ಉತ್ತರಕ್ಕೆ | ಸ.ನಂ.6 |
| | ದಕ್ಷಿಣಕ್ಕೆ | ಸ.ನಂ.95, 12 ಮತ್ತು ಸ.ನಂ.11 ರ ಉಳಿಕೆ ಜಮೀನು. |

**- :: ಚಕ್ಕುಬಂದಿ 2 :: -**

| | | |
|---|---|---|
| ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 19 ಎಕರೆ 18 ಗುಂಟೆ | ಪೂರ್ವಕ್ಕೆ | ಚಿಕ್ಕನಾಗಮಂಗಲ ಗ್ರಾಮದ ಗಡಿ |
| | ಪಶ್ಚಿಮಕ್ಕೆ | ಸ.ನಂ.10 |
| | ಉತ್ತರಕ್ಕೆ | ಸ.ನಂ.11 ರ 2-00 ಎಕರೆ |
| | ದಕ್ಷಿಣಕ್ಕೆ | ಸ.ನಂ.95, 12 ಇದೇ ಸ.ನಂ. ಪೈಕಿ ಉಳಿಕೆ ಪ್ರದೇಶ ಹಾಗೂ ಸಂಪರ್ಕ ರಸ್ತೆ. |

ಆದ್ದರಿಂದ ಅಂತಿಮ ಬಿಡ್‌ದಾರರಾದ ಸೂಪರ್ ಸೈಬರ್ ಟೆಕ್‌ಪಾರ್ಕ್ (ಪ್ರೈ) ಲಿಮಿಟೆಡ್, ಬೆಂಗಳೂರು ರವರ ಮನವಿಯನ್ನು ಪರಿಗಣಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ.11 ರಲ್ಲಿ 19-18 ಎ/ಗುಂ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿ

---3)

ಆದೇಶಿಸಿದೆ ಹಾಗೂ ಸದರಿ ಜಮೀನು ಯಾವ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆಯೋ ಅದೇ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರಿಯಾದ ಆದೇಶ ದಿನದಿಂದ ಎರಡು ವರ್ಷಗಳ ಒಳಗಾಗಿ ಉಪಯೋಗಿಸತಕ್ಕದ್ದು, ಮತ್ತು ಉಲ್ಲೇಖ (4)ರ ಅಧಿಕೃತ ಜ್ಞಾಪನ ಪತ್ರದಲ್ಲಿನ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಉಲ್ಲೇಖ (4)ರಂತೆ ದಿನಾಂಕ: 05-11-2012ರ ಅಧಿಕೃತ ಜ್ಞಾಪನವನ್ನು ರದ್ದುಪಡಿಸಲಾಗಿದೆ.

ಸಹಿ/-
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪ್ರತಿಗಳು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಆಯುಕ್ತರು, ಬೆಂಗಳೂರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳುರು ರವರಿಗೆ ಕಳುಹಿಸಿದೆ.
4. ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಗೆ ಮುಂದಿನ ನಡವಳಿಕೆಗಾಗಿ ರವಾನಿಸಿದೆ.
5. ಸೂಪರ್ ಸೈಬರ್ ಟೆಕ್‌ಪಾರ್ಕ್ (ಪ್ರೈ) ಲಿಮಿಟೆಡ್, ನಂ.60/1, 2ನೇ ಅಡ್ಡರಸ್ತೆ, ರೆಸಿಡೆನ್ಸಿ ರಸ್ತೆ, ಬೆಂಗಳೂರು-560 025.
6. ಕಛೇರಿ ಪ್ರತಿ.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

Recived. original
06/05/2019.
9880660252.

ತಹಶೀಲ್ದಾರ್
(ಜಾರಿದಳ)
ಅನಧಿಕೃತ ನಿರ್ಮಾಣಗಳ ತಡೆ ಸೆಲ್
ಜಿಲ್ಲಾಧಿಕಾರಿಗಳ ಕಛೇರಿ
ಕೆ. ಜಿ. ರಸ್ತೆ, ಬೆಂಗಳೂರು - 9.
15/11/2022